'ಒ.ಎಸ್. 275/2014

ಪಿ.ಡಬ್ಲ್ಯೂ : 1

ದಿನಾಂಕ : 20-07-2017

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯ್ತು. ದಿನಾಂಕ: 20-07-2017

ಪಾಟೀಸವಾಲು : ಪ್ರತಿವಾದಿ ಪರ ಟಿ.ಹೆಚ್.ಎಂ.ವಿ. ವಕೀಲರಿಂದ :

ಸಾಕ್ಷಿಯ ಸಲುವಾಗಿ ಏನು ಬರೆಯಿಸಿ ಹಾಕಿರುತ್ತೀಯಾ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ನಾನು ದಾವೆಯನ್ನು ಸವಿತಾಳ ಮೇಲೆ ಹಾಕಿರುತ್ತೇನೆ. ಮನೆಯ ಮೇಲೆ ದಾವೆ ಸಲ್ಲಿಸಿರುತ್ತೇನೆ. ನನ್ನ ಮನೆಯ ಡೋರ್ ನಂ. 221/2045 ಇರುತ್ತದೆ. ಪೂರ್ವ-ಪಶ್ಚಿಮ ಇಪ್ಪತ್ತೆರಡೂವರೆ ಅಡಿ ಉತ್ತರ-ದಕ್ಷಿಣ ಇಪ್ಪತ್ತೆಂಟೂವರೆ ಅಡಿ ಇರುತ್ತದೆ. ನಾನು ಸುಳ್ಳು ಹೇಳುತ್ತಿದ್ದು ಅಷ್ಟು ವಿಸ್ತೀರ್ಣ ನನ್ನದು ಇಲ್ಲ ಎಂದರೆ ಸರಿಯಲ್ಲ. ಚೆಕ್ಕುಬಂಧಿಯನ್ನು ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮನೆಯ ಚೆಕ್ಕುಬಂಧಿ ಉತ್ತರ ಮತ್ತು ದಕ್ಷಿಣಕ್ಕೆ ಬಾಗಿಲು ಇದ್ದು ಎರಡೂ ಕಡೆ ದಾರಿ ಇರುತ್ತದೆ. ಪಶ್ಚಿಮಕ್ಕೆ ನನ್ನ ತಂದೆಯ ಅಣ್ಣ ಬಸಪ್ಪನ ಮನೆ, ಪೂರ್ವಕ್ಕೆ ನಮ್ಮ ಮನೆ ಇರುತ್ತದೆ. ನಾನು ಹೇಳುತ್ತಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ವಾದಪತ್ರದಲ್ಲಿ ಇದೇ ರೀತಿಯ ಚೆಕ್ಕುಬಂಧಿಯನ್ನು ಬರೆಸಿರುತ್ತೇನೆ. ವಾದಪತ್ರದಲ್ಲಿ ಬರೆಸಿರುವ ಚೆಕ್ಕುಬಂಧಿ ಸತ್ಯ ಇರುತ್ತದೆ ಎಂದು ಹೇಳಿ ಬರೆಸಿರುತ್ತೇನೆ. ಸುಳ್ಳು ಚೆಕ್ಕುಬಂಧಿಯನ್ನು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದ ಚೆಕ್ಕುಬಂಧಿಯೇ ನಿಜ ಇರುತ್ತದೆ. ಸದರಿ ಮನೆ ಪೂರ್ವದಲ್ಲಿ ನಮ್ಮ ತಂದೆಗೆ ಸೇರಿತ್ತು. ನಮ್ಮ ತಂದೆ ಸಿದ್ದಪ್ಪ. ನನ್ನ ತಂದೆಗೆ ಲೈಟ್ ಸಿದ್ದಪ್ಪ ಮತ್ತು ಸುಣಗಾರ ಸಿದ್ದಪ್ಪ ಎಂದು ಕರೆಯುತ್ತಿದ್ದರು. ನನ್ನ ತಾತನ ಹೆಸರು ಹಾರಳು ದ್ಯಾಮಪ್ಪ. ಸುಣಗಾರ ಸಿದ್ದಪ್ಪ ನಮ್ಮ ತಂದೆ ಅಲ್ಲ ಎಂದರೆ ಸರಿಯಲ್ಲ. 1981 ರಲ್ಲಿ ದಾವಾ ಮನೆ ನಮ್ಮ ತಂದೆಯ ಹೆಸರಿನಲ್ಲಿತ್ತು. ನಮ್ಮ ತಂದೆಯ ಹೆಸರಿನಲ್ಲಿ ದಾವಾ ಮನೆ ಇತ್ತು ಎನ್ನುವುದಕ್ಕೆ ಮುನಿಸಿಪಾಲಿಟಿಯಿಂದ ಖಾತಾ ಉತ್ತಾರ ತಂದು ಹಾಜರುಪಡಿಸಿರುತ್ತೇನೆ. ಯಾವ ವರ್ಷದ ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದು ಗೊತ್ತಾಗುವುದಿಲ್ಲ. ಉಪನೋಂದಣಾಧಿಕಾರಿಯ ಕಛೇರಿಯಲ್ಲಿ ಖಾತಾ ಎಕ್ಸ್ಟ್ರ್ಯಾಕ್ಟ್‌ನ್ನು ತಂದಿರುತ್ತೇನೆ. ಅದನ್ನು ಉಪನೋಂದಣಾಧಿಕಾರಿ ಕಛೇರಿಯಿಂದ ತಂದಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ತೆರಿಗೆಯನ್ನು ಕಟ್ಟಿರುತ್ತೇನೆ. ತೆರಿಗೆ ಕಟ್ಟಿರುವ ರಶೀದಿ ಹಾಜರುಪಡಿಸಿರುತ್ತದೆ ಅಥವಾ ಇಲ್ಲ ಎಂದು ನೆನಪಿರುವುದಿಲ್ಲ. ದಾವೆಯನ್ನು ಸಲ್ಲಿಸಿದ ನಂತರ ತೆರಿಗೆ ಕಟ್ಟಿರುತ್ತೇನೆ ಸದರಿ ರಶೀದಿಯನ್ನು ಹಾಜರುಪಡಿಸಿರುವುದಿಲ್ಲ. ನಮ್ಮ ತಂದೆ ಜೀವಂತ ಇದ್ದಾಗ ತೆರಿಗೆ ಕಟ್ಟಿರುತ್ತದೆ ರಶೀದಿಗಳನ್ನು ಹಾಜರುಪಡಿಸಿರಬಹುದು ನೆನಪಿರುವುದಿಲ್ಲ. ನಾನಾಗಲಿ ನನ್ನ ತಂದೆಯಾಗಲಿ ತೆರಿಗೆಯನ್ನು ಕಟ್ಟಿಲ್ಲ ಅದ್ದರಿಂದ ಮನೆಯಲ್ಲಿ ರಶೀದಿಗಳು ಇರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮನೆ 11 ನೇ ವಾರ್ಡ್‌ನಲ್ಲಿ ಇರುತ್ತದೆ. ಸದರಿ ಮನೆಯ ಮಾಲಕಳು ನಾನೂ ಅಲ್ಲ ಮತ್ತು ನಮ್ಮ ತಂದೆಯೂ ಅಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮಾಲಕ ಎನ್ನುವುದಕ್ಕೆ ನೋಂದಾಯಿತ ಕಾಗದಪತ್ರಗಳು ಇರುತ್ತವೆಯೇ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾಳೆ. ಮುನಿಸಿಪಾಲಿಟಿಯಿಂದ ಯಾವುದೋ ದಾಖಲೆಯನ್ನು ಸೃಷ್ಠಿ ಮಾಡಿಕೊಂಡು ಬಂದು ಇದು ನಮ್ಮ ತಂದೆಯ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಬಸವ್ವ ಮತ್ತು ಸಿದ್ದಪ್ಪ ಇವರಿಗೆ

ನಾನು ಒಬ್ಬಳೇ ಮಗಳು ಬೇರೆ ಯಾರೂ ಇರುವುದಿಲ್ಲ. ಮುನಿಸಿಪಾಲಿಟಿಯಲ್ಲಿ ನಮ್ಮ ತಂದೆ ಮತ್ತು ನಮ್ಮ ತಾತನ ಹೆಸರಿನಲ್ಲಿ ಎಷ್ಟು ವರ್ಷದಿಂದ ಖಾತೆ ಇತ್ತೆಂದು ನನಗೆ ಗೊತ್ತಿರುವುದಿಲ್ಲ ನನ್ನ ಮಕ್ಕಳಿಗೆ ಗೊತ್ತಿರುತ್ತದೆ. 1989 ರಲ್ಲಿ ನನ್ನ ತಂದೆ ಮರಣ ಶಾಸನವನ್ನು ಬರೆದುಕೊಟ್ಟಿರುತ್ತಾನೆ. 7 ನೇ ತಿಂಗಳು ಇರಬಹುದು ತಾರೀಖು ನೆನಪಿರುವುದಿಲ್ಲ. ಮರಣ ಶಾಸನದಲ್ಲಿ ನಮ್ಮ ತಂದೆ ಯಾರ ಮಗ ಬರೆಸಿರುತ್ತಾನೆಂದು ಗೊತ್ತಿರುವುದಿಲ್ಲ. ಮರಣ ಶಾಸನ ನಮ್ಮ ಮನೆಯಲ್ಲಿಯೇ ಇತ್ತು. ನನಗೆ ಈಗ 48 ವರ್ಷ ವಯಸ್ಸು. ಆ ಸಮಯದಲ್ಲಿ ನನಗೆ ಮದುವೆ ಆಗಿತ್ತು. ನಿಪಿ 2 ನ್ನು ನಮ್ಮ ತಂದೆ ಬರೆಸಿರುತ್ತಾನೆ ಎಲ್ಲಿ ಬರೆಸಿರುತ್ತಾನೆ ಎಂದು ಗೊತ್ತಿರುವುದಿಲ್ಲ. ನಿಪಿ 2 ರಲ್ಲಿ ನಮ್ಮ ತಂದೆ ಎಂತಹ ದ್ಯಾಮಪ್ಪನ ಮಗ ಎಂದು ಬರೆಸಿರುತ್ತಾನೆ ಎಂದು ಗೊತ್ತಿರುವುದಿಲ್ಲ. ಸದರಿ ಮನೆ ನಮ್ಮ ತಂದೆಗೆ ಹೇಗೆ ಬಂದಿತ್ತೆಂದು ಗೊತ್ತಿರುವುದಿಲ್ಲ. ನಮ್ಮ ತಂದೆಗೆ ಗೂರು , ಕೆಮ್ಮು ಇತ್ತು ಎನ್ನುವುದು ನಿಜ. ಬಹಳ ಕೃಶವಾಗಿದ್ದ ಎಂದರೆ ಸಾಕ್ಷಿ ಆರಾಮಾಗಿದ್ದ ಎಂದು ಹೇಳುತ್ತಾಳೆ. ನಮ್ಮ ತಂದೆಗೆ ನಡೆದಾಡುವ ಶಕ್ತಿ ಇರಲಿಲ್ಲ ಅವನು ಮನೆಯಲ್ಲಿ ಹಾಸಿಗೆಯಲ್ಲಿ ಬಿದ್ದಿದ್ದ ಎಂದರೆ ಸರಿಯಲ್ಲ. ನಿಪಿ 2 ನ್ನು ನಾನೇ ಸೃಷ್ಠಿ ಮಾಡಿ ನಾನೇ ಇಟ್ಟುಕೊಂಡಿದ್ದೆ ಎಂದರೆ ಸರಿಯಲ್ಲ. ನನಗೆ ಮದುವೆಯಾದ 3 ವರ್ಷಕ್ಕೆ ಮಕ್ಕಳು ಆಗಿರುತ್ತವೆ. ನನ್ನ ಮಕ್ಕಳು 5-6 ವರ್ಷದವರು ಇದ್ದಾಗ ನಿಪಿ 2 ಸಿಕ್ಕಿರುತ್ತದೆ. ಯಾವ ದಿನಾಂಕ ತಿಂಗಳು ವರ್ಷದಂದೂ ನಿಪಿ 2 ಸಿಕ್ಕಿರುತ್ತದೆ ಎಂದು ನೆನಪಿರುವುದಿಲ್ಲ. ನನಗೆ 2 ಮಕ್ಕಳು ಆದ ನಂತರ ನಮ್ಮ ತಂದೆ ಆರೋಗ್ಯ ಕೆಟ್ಟಾಗ ನಾನೇ ನಿಪಿ 2 ನ್ನು ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮದುವೆಯಾದ ತಾರೀಖು, ತಿಂಗಳು ಮತ್ತು ವರ್ಷ ನೆನಪಿರುವುದಿಲ್ಲ. ನನ್ನ ಗಂಡನ ಹೆಸರು ರಾಮಪ್ಪ. ನನ್ನ ಗಂಡನ ತಂದೆಯ ಹೆಸರು ಗೊತ್ತಿರುವುದಿಲ್ಲ. ಮದುವೆ ನೋಂದಣಿ ಪತ್ರ ಮನೆಯಲ್ಲಿ ಇದ್ದು ಅದನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಸ.ನಂ. 316 ವಿಸ್ತೀರ್ಣ 9 ಎಕರೆ 80 ಸೆಂಟ್ಸ್ ಇರುತ್ತದೆ. ಸದರಿ ಜಮೀನಿನ ಪಹಣಿಯನ್ನು ಹಾಜರುಪಡಿಸಿಲ್ಲ. ನನ್ನ ಹೆಸರಿನಲ್ಲಿ ಪಹಣಿ ಇಲ್ಲ ಆದ್ದರಿಂದ ಹಾಜರುಪಡಿಸಿಲ್ಲ ವಿಲ್ಲನ್ನು ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗೆ ಮಾಲಕ ಹಾಗೂ ಸ್ವಾಧೀನದಾರಳು ಅಲ್ಲ ಎಂದರೆ ಸರಿಯಲ್ಲ. ನನ್ನ ಹೆಸರಿಗೆ ಖಾತಾ ಬದಲಾವಣೆ ಮಾಡಿರುವುದಕ್ಕೆ ಇ.ಸಿ.ಯನ್ನು ಹಾಜರುಪಡಿಸಿರುತ್ತೇನೆ. ನಾನು ಸುಳ್ಳು ಹೇಳುತ್ತಿದ್ದು ಏನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಋಣಭಾರ ಪತ್ರವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಕಟ್ಟಿದ ಮನೆಗೆ ಮರಣ ಶಾಸನವನ್ನು ಬರೆದುಕೊಟ್ಟಿರುತ್ತಾನೆ. ಕಟ್ಟಿದ ಮನೆ ಇಪ್ಪತ್ತೆರಡೂವರೆ ಅಗಲ , ಇಪ್ಪತ್ತೆಂಟೂವರೆ ಅಡಿ ಉದ್ದ ಇತ್ತು. ಯಾವ ಇಸ್ವಿಯಲ್ಲಿ ಕಟ್ಟಿಸಿರುತ್ತಾನೆ ಎಂದು ನೆನಪಿರುವುದಿಲ್ಲ. ನಮ್ಮ ಕಟ್ಟಿಸಿರುತ್ತಾನೋ ಅಥವಾ ಯಾರು ಕಟ್ಟಿಸಿರುತ್ತಾರೆ ಎಂದು ಗೊತ್ತಿರುವುದಿಲ್ಲ. ನಮ್ಮ ತಂದೆ 30-40 ವರ್ಷದ ಹಿಂದೆ ಮನೆ ಕಟ್ಟಿಸಿರುತ್ತಾನೆ ಎಂದು ವಾದಪತ್ರದಲ್ಲಿ ಬರೆಸಿಲ್ಲ. 15-20 ವರ್ಷದ ಕೆಳಗೆ ನಮ್ಮ ತಂದೆ ಅದರಲ್ಲಿ ಮನೆಯನ್ನು ಕಟ್ಟಿಸಿರುತ್ತಾನೆ ಎಂದು ವಾದಪತ್ರದಲ್ಲಿ ಬರೆಸಿಲ್ಲ. ನಮ್ಮ ಮನೆಯ ಡೋರ್ ನಂಬರ್ ಮೇಲೆ ಮಾತ್ರ ದಾವೆ ಸಲ್ಲಿಸಿರುತ್ತೇನೆ. ನಮ್ಮ ಮನೆಗೂ ಮತ್ತು ಪ್ರತಿವಾದಿ ತೆಗೆದುಕೊಂಡ ಮನೆ ಹೊಂದಿಕೊಂಡಿವೆ ಎನ್ನುವುದು ನಿಜ. ಪ್ರತಿವಾದಿ ಖರೀದಿಸಿರುವುದು ಮನೆ ಇಲ್ಲ ಬಯಲು ಜಾಗ ಇರುತ್ತದೆ. ನಮ್ಮ ಮನೆ ಮತ್ತು ಪ್ರತಿವಾದಿ ಖರೀದಿಸಿರುವ ಮನೆ ಎರಡೂ ಮನೆಯ ಗೋಡೆ ಏಕತ್ರ

ಗೋಡೆ ಇರುತ್ತದೆ ಎನ್ನುವುದು ನಿಜ. ಪ್ರತಿವಾದಿ 2014 ರಲ್ಲಿ ಖರೀದಿ ಮಾಡಿರುತ್ತಾಳೆ. ಪ್ರತಿವಾದಿ ಖರೀದಿ ಮಾಡಿರುತ್ತಾಳೆ ಎನ್ನುವುದಕ್ಕೆ ನಾನು ಕಾಗದಪತ್ರವನ್ನು ಹಾಜರುಪಡಿಸಿರುತ್ತೀಯಾ ಅಥವಾ ಇಲ್ಲ ಎಂದು ಗೊತ್ತಿರುವುದಿಲ್ಲ. ಪ್ರತಿವಾದಿ ಖರೀದಿ ಮಾಡಿದಾಗ ಬಯಲು ಜಾಗ ಇತ್ತು. ಅದು ಎಷ್ಟು ಉದ್ದ ಅಗಲ ಇತ್ತು ಎಂದು ಗೊತ್ತಿರುವುದಿಲ್ಲ. ಪ್ರತಿವಾದಿ ಖರೀದಿ ಮಾಡಿದಾಗ ಅದು ಮನೆ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿಯ ಖರೀದಿ ಪತ್ರವನ್ನು ರದ್ದುಪಡಿಸಬೇಕು ಎಂದು ನ್ಯಾಯಾಲಯದಲ್ಲಿ ಕೇಳಿಕೊಂಡಿರುತ್ತೇನೆ. ನಾನು ಆ ರೀತಿ ದಾವೆಯನ್ನು ಸಲ್ಲಿಸಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಖರೀದಿ ಪತ್ರ ರದ್ದುಪಡಿಸಲು ನ್ಯಾಯಾಲಯದ ಶುಲ್ಕವನ್ನು ಭರಿಸಿರುತ್ತದೆ ಅಥವಾ ಇಲ್ಲ ಎಂದು ಗೊತ್ತಿರುವುದಿಲ್ಲ. ಪ್ರತಿವಾದಿ ಅಧಿಕೃತವಾಗಿ ನ್ಯಾಯೋಚಿತವಾಗಿ ಯಾರಿಗೆ ಸೇರಿದ್ದು ಎಂದು ನೋಡಿ ಖರೀದಿ ಮಾಡಿರುತ್ತಾಳೆಂದರೆ ಸರಿಯಲ್ಲ. ಖರೀದಿ ಮಾಡಿರುವ ಮನೆ ನನ್ನ ಹೆಸರಿನಲ್ಲಿ ಇಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಹಣ ಕೊಟ್ಟ ವಿಷಯ ಖರೀದಿ ಮಾಡಿದ ವಿಷಯ ನನಗೆ ಗೊತ್ತಿರುತ್ತದೆ ಎಂದರೆ ಸಾಕ್ಷಿ ಒಳಂಗಿದೊಳಗೆ ಮಾಡಿಕೊಂಡಿರುತ್ತಾರೆ ಎಂದು ಹೇಳೂತ್ತಾನೆ. ನೋಂದಣಿ ಮಾಡಿಸಿಕೊಂಡಿರುವ ವಿಷಯ ಎಲ್ಲಾ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಪಕ್ಕದಲ್ಲಿ ಮನೆ ಇರುತ್ತದೆ ನನಗೇ ಕೊಡಿ ಎಂದು ಮಾರಾಟ ಮಾಡಿದವರಿಗೆ ನಾನು ಕೇಳಿದೆ ಅವರು ಕೊಡಲಿಲ್ಲ ಎಂದರೆ ಸರಿಯಲ್ಲ. ಆ ಮನೆಯನ್ನು ನನಗೆ ಕೊಡಲಿಲ್ಲ ಎನ್ನುವ ಕಾರಣ ಹೊಟ್ಟೆಕಿಚ್ಚಿನಿಂದ ಈ ರೀತಿ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಕ್ರಯಪತ್ರ ರದ್ದತಿಗೆ ನ್ಯಾಯಾಲಯದ ಶುಲ್ಕ ಏಕೆ ಕಟ್ಟಬೇಕು ಎಂದು ಸರ್ಕಾರಕ್ಕೆ ಮೋಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಮನೆಯನ್ನು ಖರೀದಿ ಮಾಡುವಾಗ ಮುನಿಸಿಪಾಲಿಟಿಯಲ್ಲಿ ಪರಿಶೀಲನೆ ಮಾಡಿ ಎಲ್ಲಾ ದಾಖಲೆಗಳನ್ನು ನೋಡಿ ಖರೀದಿ ಮಾಡಿರುತ್ತಾಳೆಂದರೆ ಸರಿಯಲ್ಲ. ಪ್ರತಿವಾದಿಗೆ ಯಾರು ನೋಂದಣಿ ಮಾಡಿಸಿಕೊಟ್ಟಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಪ್ರತಿವಾದಿ ವಾರ್ಡ್ ನಂ. 11 ರಲ್ಲಿ ಇರುವ ಡೋರ್ ನಂ. 280/2046 ನ್ನು ಖರೀದಿ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ಡೋರ್ ನಂ. 280/2046 ನ್ನು ಪ್ರತಿವಾದಿ ಅಧಿಕೃತವಾಗಿ ಖರೀದಿಸಿ ನೋಂದಣಿ ಮಾಡಿಸಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ಸರೋಜಮ್ಮ, ಜಯರತ್ನಮ್ಮ ಮತ್ತು ಪ್ರೇಮಲತಾ ಇವರಿಂದ ಪ್ರತಿವಾದಿ ಖರೀದಿ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ನನ್ನ ಹತ್ತಿರ ಹಣ ಇದ್ದು ನನಗೆ ಬಹಳ ಪ್ರಭಾವ ಇರುತ್ತದೆ ಎಂದರೆ ಸರಿಯಲ್ಲ. ಪೋಲಿಸರಿಗೆ ಫಿರ್ಯಾದಿಯನ್ನು ಕೊಡಲು ಹೋಗಿದ್ದೆ ತೆಗೆದುಕೊಂಡಿಲ್ಲ. ಫಿರ್ಯಾದಿ ಕೊಡಲು ಹೋದ ತಾರೀಖು, ತಿಂಗಳು ನೆನಪಿರುವುದಿಲ್ಲ. ಬರವಣಿಗೆಯಲ್ಲಿ ಫಿರ್ಯಾದಿಯನ್ನು ಕೊಟ್ಟಿದ್ದೆ ಆದರೆ ಅವರು ತೆಗೆದುಕೊಂಡಿಲ್ಲ. ಫಿರ್ಯಾದಿಯ ನಕಲನ್ನು ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿ ನಮ್ಮ ತಂದೆ ನಮ್ಮ ತಾತನದ್ದು ಎಂದು ಯಾವುದೇ ಪರಿಜ್ಞಾನ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಖರೀದಿಸಿದಾಗ ಅಲ್ಲಿ 100-170 ವರ್ಷದ ಹಳೆ ಮನೆ ಇತ್ತು ಎಂದರೆ ಸರಿಯಲ್ಲ. ಬಯಲು ಜಾಗ ಎಂದು ಸೃಷ್ಠಿ ಮಾಡಿ ಈಗ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಮಾರಾಟ ಮಾಡಿದವರು ಅಧಿಕೃತ ಮಾಲಕರು ಇದ್ದು ಖರೀದಿ ಮಾಡಿದ ನಂತರ ಪ್ರತಿವಾದಿ ಅಧಿಕೃತ ಮಾಲಕಳು ಇರುತ್ತಾಳೆ ಎಂದರೆ ಸರಿಯಲ್ಲ. ಪ್ರತಿವಾದಿ ಖರೀದಿಸಿದ ಮನೆ ಹೇಗಾದರೂ ಮಾಡಿ ನಾನು ಪಡೆದುಕೊಳ್ಳಬೇಕು ಎಂದು ಪ್ರಯತ್ನ ಮಾಡಿದೆ

ಆದರೆ ಅದು ಆಗಲಿಲ್ಲ ಎಂದರೆ ಸರಿಯಲ್ಲ. ಆ ಮನೆ ನನ್ನ ಕೈತಪ್ಪಿ ಹೋಗುತ್ತದೆ ಎನ್ನುವ ದುರಾಸೆಯಿಂದ ಪ್ರತಿವಾದಿಯ ವಿರುದ್ಧ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮಗೂ ಪ್ರತಿವಾದಿಯ ಮನೆಯವರಿಗೂ ಹಗೆತನ ಬಹಳ ಇತ್ತು ಈ ಮನೆಯನ್ನು ಖರೀದಿಸಿದ ನಂತರ ಹಗೆತನ ಹೆಚ್ಚಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಒಬ್ಬಳೇ ಮಗಳು ಇರುವ ಕಾರಣ ಮರಣಶಾಸವನ್ನು ಬರೆಸಿಕೊಳ್ಳುವ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿ ತಂದೆಯ ಅಣ್ಣ ತಮ್ಮಂದಿರ ಕಿರುಕುಳ ಇದ್ದ ಕಾರಣ ಬರೆದುಕೊಟ್ಟಿರುತ್ತಾನೆ ಎಂದು ಹೇಳುತ್ತಾಳೆ. ದಿಃ 07-08-2014 ರಂದು ಪ್ರತಿವಾದಿ ನ್ಯಾಯೋಚಿತವಾಗಿ ಖರೀದಿ ಮಾಡಿರುತ್ತಾಳೆಂದರೆ ಸರಿಯಲ್ಲ. ಜಯರತ್ನಮ್ಮ, ಸರೋಜಮ್ಮ ಮತ್ತು ಪ್ರೇಮಲತಾ ಉಪನೋಂದಣಾಧಿಕಾರಿ ಕಛೇರಿಯಲ್ಲಿ ಹಣ ಪಡೆದು ಪ್ರತಿವಾದಿಯ ಪರ ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. 11ನೇ ವಾರ್ಡ್‌ನಲ್ಲಿರುವ ಖಾಲಿ ಜಾಗ ಮತ್ತು ಮನೆ ಎರಡೂ ಸೇರಿ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 280/2046 ಅಳತೆ 15X9 ಅಡಿ ಒಟ್ಟು 135 ಚದರಡಿ. ಡೋರ್ ನಂ. 281/2046 ಉದ್ದಳತೆ ಹತ್ತೂವರೆ ಅಡಿ X ಇಪ್ಪತ್ತೆರಡೂವರೆ ಅಡಿ ಒಟ್ಟು 236.25 ಚದರಡಿಯನ್ನು ಪ್ರತಿವಾದಿಗೆ ಖರೀದಿ ಪತ್ರದ ಮೂಲಕ ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಎರಡೂ ನಿವೇಶನಕ್ಕೂ ಒಂದೇ ಚೆಕ್ಕುಬಂಧಿ ಎನ್ನುವುದು ಸುಳ್ಳು . ಪೂರ್ವಕ್ಕೆ ಬಾರಿಕರ ರಾಮಪ್ಪನ ಬಯಲು ಜಾಗ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ನನ್ನ ಮನೆ ಎನ್ನುವುದು ನಿಜ. ಉತ್ತರಕ್ಕೆ ರಂಗಾರಿ ಮಾರುತೆಪ್ಪನ ಮನೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ದಾರಿ ಇರುತ್ತದೆ ಎನ್ನುವುದು ನಿಜ. 50,000 ರೂ. ಕೊಟ್ಟು ಪ್ರತಿವಾದಿ ನೋಂದಣಿ ಮಾಡಿಸಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ಸಾಕ್ಷಿಯ ಸಮಕ್ಷಮದಲ್ಲಿ ಹಣ ಕೊಟ್ಟು ಖರೀದಿ ಮಾಡಿ ಪ್ರತಿವಾದಿ ಸ್ವಾಧೀನತೆಯಲ್ಲಿ ಇರುತ್ತಾಳೆ ಎಂದರೆ ಸರಿಯಲ್ಲ. ಪ್ರತಿವಾದಿ ಬೀಗ ಹೊಡೆದು ಆ ಮನೆಯಲ್ಲಿ ವಾಸವಾಗಿರುತ್ತಾಳೆ. ಬೀಗ ಹಾಕಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿಃ 11-01-1977 ರಲ್ಲಿ 200 ರೂ. ಗಳಿಗೆ ಇದೇ ಜಾಗವನ್ನು ಕ್ರಯಪತ್ರದ ಮೂಲಕ ಮರಿಯಾಂಬಿ ತುಂಬಪ್ಪನಿಗೆ ಮಾರಾಟ ಮಾಡಿರುತ್ತಾಳೆ ಎನ್ನುವುದು ಸುಳ್ಳು. ಡೋರ್ ನಂಬರ್ ಅದು ಯಾವ ವಾರ್ಡಿನಲ್ಲಿ ಇದೆ ಮತ್ತು ಚೆಕ್ಕುಬಂಧಿಯನ್ನು ವಿವರವಾಗಿ ಬರೆದಿರುತ್ತಾರೆಂದರೆ ಸರಿಯಲ್ಲ. ಮೂಲಪತ್ರವನ್ನು ಪ್ರತಿವಾದಿಗೆ ಅವರು ಕೊಟ್ಟಿರುತ್ತಾರೆ ಎನ್ನುವುದು ಸುಳ್ಳು. 1978 ರಲ್ಲಿ ಗುಂಡಗತ್ತಿ ನಾಗರತ್ನಮ್ಮ ಇವಳು ತುಂಬಪ್ಪನಿಂದ ಖರೀದಿ ಮಾಡಿದ್ದು ಸದರಿ ಖರೀದಿ ಪತ್ರವನ್ನು ಪ್ರತಿವಾದಿ ನೋಡಿ ನಮಗೆ ಸಂಬಂಧಪಟ್ಟಿದ್ದು ಅಲ್ಲ ಎಂದು ಗೊತ್ತಾದ ಮೇಲೆ ಖರೀದಿ ಮಾಡಿರುತ್ತಾಳೆಂದರೆ ಸರಿಯಲ್ಲ. ಆ ಸಮಯದಲ್ಲಿ ಡೋರ್ ನಂಬರ್ ಉದ್ದಗಲ ಚೆಕ್ಕುಬಂಧಿಯನ್ನು ಪರಿಶೀಲನೆ ಮಾಡಿ ಪ್ರತಿವಾದಿ ಖರೀದಿ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ಋಣಭಾರ ಪತ್ರವನ್ನು ನೋಡಿದ್ದು ಅದರಲ್ಲಿ ಯಾರಿಗೂ ಮಾರಾಟ ಮಾಡಿರಲಿಲ್ಲ ಅದನ್ನು ನೋಡಿ ಖರೀದಿ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ತೆರಿಗೆಯನ್ನೂ ಸಹ ಆ ಮನೆಗೆ ಕಟ್ಟಿದ್ದಳು ಎಂದರೆ ಸರಿಯಲ್ಲ. ಬೇಬಾಕಿ ಮಾಡಿ ತೆರಿಗೆಯನ್ನು ಕಟ್ಟಿ ಪ್ರತಿವಾದಿಗೆ ನೋಂದಣಿ ಮಾಡಿಸಿಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. 1977-78 ರ ಖರೀದಿ ಪತ್ರ ಕೆಂಗಣ್ಣ ಇವರೆಲ್ಲಾ ಮೃತಪಟ್ಟ ನಂತರ ಸರೋಜಮ್ಮ, ಜಯರತ್ನಮ್ಮ ಮತ್ತು ಪ್ರೇಮಲತಾ ಮರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ನಮ್ಮ ಓಣಿಯಲ್ಲಿ ಜಗಳ ಸೃಷ್ಠಿ ಮಾಡುತ್ತಿದ್ದೇನೆಂದರೆ ಸರಿಯಲ್ಲ.

ನನಗೆ ದಾವಾ ಸಲ್ಲಿಸಲು ಹಕ್ಕು ಇರುವುದಿಲ್ಲ ಪ್ರತಿವಾದಿಗೆ ಸೇರಿದ ಮನೆಗೆ ದಾವೆ ಸಲ್ಲಿಸಿ ಅವಳಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಬಡವಿ ಇದ್ದು ಅವಳಿಗೆ ಸಣ್ಣ ಮಕ್ಕಳು ಇದ್ದು ಅವಳನ್ನು ಕಾಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**ಸಿವಿಲ್ ಜಡ್ಜ್, ಹರಪನಹಳ್ಳಿ.**